# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ: 29-05-2021 ರಂದು ನಡೆದ ವಾರ್ಡ್ ಡಿಟರ್ ಕಮಿಟಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಡಾ|| ಶಾಹೀನಾ, ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ವಾರ್ಡ್ ಸಂಖ್ಯೆ.29.
4. ಶ್ರೀ.ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು,
5. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ),
6. ಶ್ರೀ ಪ್ರಸನ್ನ, ಸದಸ್ಯರು, ಹೆಚ್.ಬಿ.ಆರ್ ಬಡಾವಣೆ ಅಸೋಸಿಯೇಷನ್(ರಿ)
7. ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ)

**ಹಾಜರಿದ್ದ ಅಧಿಕಾರಿಗಳು**

1. ಶ್ರೀ.ದವಲ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ),
2. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
3. ಮಾರ್ಷಲ್, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
4. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ,
5. ಸಬ್ ಇನ್ಸ್‌ಪೆಕ್ಟರ್ (ಸಂಚಾರ) ಬಾಣಸವಾಡಿ ಪೊಲೀಸ್ ಠಾಣೆ,
6. ಶ್ರೀ ಪುಟ್ಟಸ್ವಾಮಿ, ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ.
7. ಶ್ರೀಮತಿ ಗೀತಾ, ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ.
8. ಶ್ರೀಮತಿ ರಾಜಶ್ರೀ, ಕಲ್ಯಾಣ ಇಲಾಖೆ,

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯ ನಡವಳಿಗಳು**

1) **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)** ರವರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ದಿನ ನಿತ್ಯ ಸೋಡಿಯಂ ಹೈಪೋಕ್ಲೋರೈಡ್ ದ್ರಾವಣದಿಂದ ಸ್ಯಾನಿಟೈಸೇಷನ್ ಮಾಡಲಾಗುತ್ತಿರುತ್ತದೆ. ಮತ್ತು 45 ವರ್ಷ ಮೇಲ್ಪಟ್ಟವರಿಗೆ ಮತ್ತು 18 ವರ್ಷದಿಂದ 45 ವರ್ಷದ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ಅನ್ನು ಸಿ.ಎಂ.ಆರ್ ಸ್ಕೂಲ್‌ನಲ್ಲಿ ನೀಡಲಾಗುತ್ತಿದ್ದು, ಇದು ಶ್ಲಾಘನೀಯವೆಂದು ಪ್ರಶಂಸಿರುತ್ತಾರೆ.

2) **ಶ್ರೀಮತಿ ವಿನುತ, ಪದಾಧಿಕಾರಿಗಳು, ಹೆಚ್.ಆರ್.ಬಿ.ಆರ್, 3ನೇ ಹಂತ ಬಿಡಿಎ ಬಡಾವಣೆ ಅಸೋಸಿಯೇಷನ್(ರಿ)** ರವರು ಮಾತನಾಡಿ, ಇತ್ತೀಚೆಗೆ ಲಾಕ್‌ಟೌನ್ ಜಾರಿಯಲ್ಲಿರುವುದರಿಂದ ಹಲವು ಯುವಕರು ಗ್ಯಾಂಗ್ ಕಟ್ಟಿಕೊಂಡು ದ್ವಿ ಚಕ್ರ ವಾಹನಗಳಲ್ಲಿ ಪೊಲೀಸರ ಕಣ್ತಪ್ಪಿಸಿ ಓಡಾಡುತ್ತಿರುತ್ತಾರೆ. ಇದನ್ನು ತೀಕ್ಷ್ಣವಾಗಿ ಪರಿಗಣಿಸಿ, ಇದನ್ನು ನಿಯಂತ್ರಿಸಲು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಹಾಯಕ ಸಬ್‌ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ ರವರಿಗೆ ಕ್ರಮ ವಹಿಸಲು ಸೂಚಿಸಿದರು.

3) **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ),** ರವರು ಮಾತನಾಡಿ, ವಾರ್ಡಿನ ಪ್ರಮುಖ ಸ್ಥಳಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಹಣ್ಣು, ತರಕಾರಿ ಇತ್ಯಾದಿಗಳನ್ನು ನಿರಂತರವಾಗಿ ವ್ಯಾಪಾರ ಮಾಡುತ್ತಿದ್ದು, ಅನೇಕ ಸಾರ್ವಜನಿಕರು ಹಣ್ಣು, ತರಕಾರಿ ಇತ್ಯಾದಿಗಳನ್ನು ಕೊಳ್ಳಲು ಬೀದಿ ಬದಿಯ ವ್ಯಾಪಾರಸ್ಥರ ಬಳಿ ಬರುತ್ತಾರೆ. ಬೀದಿ ಬದಿ ವ್ಯಾಪಾರಸ್ಥರು ಕ್ರಮ ಬದ್ದವಾಗಿ ಮಾಸ್ಕ್‌ಗಳನ್ನು ಧರಿಸಿರುವುದಿಲ್ಲ ಮತ್ತು ಸಾಮಾಜಿಕ ಅಂತರವನ್ನು ಸಹ ಕಾಯ್ದುಕೊಂಡಿರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಸುಲಭವಾಗಿ ಕರೋನಾಹ ಹರಡಲು ಸಹಕಾರಿಯಾಗಿರುತ್ತದೆ. ಆದ್ದರಿಂದ ಸದರಿ ಬೀದಿ ಬದಿ ವ್ಯಾಪಾರಿಗಳಿಗೆ ಪ್ರಥಮ ಆದ್ಯತೆ ಮೇರೆಗೆ ಲಸಿಕೆಯನ್ನು ನೀಡಲು ಕೋರಿ ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ಕೂಡಲೇ ಬೀದಿ ಬದಿ ವ್ಯಾಪಾರಿಗಳ ಸರ್ವೇಕ್ಷಣ ಮಾಡಿ, ಪಟ್ಟಿಯನ್ನು ತಯಾರಿಸಿ, ಪರಿಶೀಲಿಸಿ, ಆದ್ಯತೆ ಮೇರೆಗೆ ಲಸಿಕೆಯನ್ನು ನೀಡಲು ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗೆ ಸಭೆಯು ಸರ್ವಾನುಮತದಿಂದ ಆದೇಶಿಸಿತು.

4) **ಡಾ॥ ಶಾಹೀನಾ, ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ವಾರ್ಡ್ ಸಂಖ್ಯೆ.29.** ರವರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸಿ, ದೃಢೀಕರಿಸಿಕೊಡಲು ಕೋರಿದಾಗ, ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರು ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ ಯಾವುದೇ ಅಧಿಕೃತ ಕೊಳಚೆ ಪ್ರದೇಶಗಳು ಕೊಳಚೆ ನಿರ್ಮೂಲನಾ ಮಂಡಳಿಯಿಂದ ದೃಢಪಟ್ಟಿರುವುದಿಲ್ಲ ಎಂದು ಸಭೆಗೆ ಉತ್ತರಿಸಿದರು.

5) **ಡಾ॥ ಶಾಹೀನಾ, ವೈದ್ಯಾಧಿಕಾರಿಗಳು, ಆರೋಗ್ಯ ಕೇಂದ್ರ, ವಾರ್ಡ್ ಸಂಖ್ಯೆ.29.** ರವರು ಮಾತನಾಡಿ, ಪ್ರಸ್ತುತ ವಾರ್ಡ್ ಸಂಖ್ಯೆ.29 ರಲ್ಲಿ ಜ್ಯೋತಿ ಶಾಲೆಯಲ್ಲಿ ವಾರ್‌ರೂಮ್ ಉದ್ಘಾಟನೆಯಾಗಿ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿರುತ್ತದೆ. ಮತ್ತು ಇದೇ ವಾರ್ಡ್ ಪ್ರದೇಶದಲ್ಲಿ ಇಂಡಿಯನ್ ಕ್ಯಾಂಪಸ್ ಕ್ರುಸೇಡ್ ನಲ್ಲಿ ಟ್ರೈಯಾಜ್ ಸೆಂಟರ್ ಹಾಗೂ ಕೋವಿಡ್ ಕೇರ್ ಸೆಂಟರ್ ಆಸ್ಪತ್ರೆಯನ್ನು ಮಾನ್ಯ ಉಸ್ತುವಾರಿ ಸಚಿವರು ಹಾಗೂ ಮಾನ್ಯ ಸ್ಥಳೀಯ ಶಾಸಕರು ಮತ್ತು ಮಾನ್ಯ ಸ್ಥಳೀಯ

ಲೋಕಸಭಾ ಸದಸ್ಯರು ಉದ್ಘಾಟನೆ ಮಾಡಿರುತ್ತಾರೆ. ಪ್ರಸ್ತುತ ಆಸ್ಪತ್ರೆಯು ಕಾರ್ಯ ನಿರ್ವಹಿಸುತ್ತಿರುತ್ತದೆ.

ಮುಂದುವರೆದು ವಾರ್ಡ್ ಪ್ರದೇಶದಲ್ಲಿ ಕೋವಿಡ್ ಪರೀಕ್ಷೆಗಳು ನಿರಂತರವಾಗಿ ಕೈಗೊಳ್ಳಲಾಗುತ್ತಿದ್ದು, 226 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 220 ಹೋಮ್ ಐಸೋಲೇಷನ್ ನಲ್ಲಿ ಇರುತ್ತಾರೆ. 05 ಜನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ. 01 ಮರಣ ಹೊಂದಿರುತ್ತಾರೆ. ಇಲ್ಲಿಯವರೆಗೆ ಆರ್.ಟಿ.ಪಿ.ಸಿ.ಆರ್ ಮತ್ತು ರ್‍ಯಾಪಿಡ್ ಪರೀಕ್ಷೆಗಳು ಸೇರಿ ಒಟ್ಟು 46241 ಆಗಿದ್ದು, ರಾಮಯ್ಯ ಬಡಾವಣೆ, 3ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ನಂ.109 ಕಟ್ಟಡದಲ್ಲಿ 05 ಜನ ಸೋಂಕಿತರಿದ್ದು, ಇದನ್ನು ಮೈಕ್ರೋ ಕಂಟೈನ್‌ಮೆಂಟ್ ಜೋನ್ ಎಂದು ಪರಿಗಣಿಸಲಾಗಿರುತ್ತದೆ.

ವಾರ್ಡ್ ಪ್ರದೇಶದ ಸಿ.ಎಂ.ಆರ್ ಶಾಲೆಯಲ್ಲಿ ನಿರಂತರವಾಗಿ ಲಸಿಕೆ ನೀಡುವ ಕಾರ್ಯಕ್ರಮ ನಡೆಯುತ್ತಿದ್ದು, ಈವರೆಗೆ 45 ವರ್ಷ ಮೇಲ್ಪಟ್ಟವರಿಗೆ 17860 ಜನರಿಗೆ ಹಾಗೂ 45 ವರ್ಷ ಒಳಗಿನ ವ್ಯಕ್ತಿಗಳಿಗೆ 460 ಜನರಿಗೆ ಒಟ್ಟು 18320 ಜನರಿಗೆ ಲಸಿಕೆಯನ್ನು ನೀಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

Prasanna Kumar. K
ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ

**ಪ್ರತಿಯನ್ನು**

1) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರಳು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.
5) ಕಛೇರಿ ಕಡತಕ್ಕೆ.